"ಯಾವ ತಪ್ಪು?'' ಅದನ್ನು ನಾವು ನಿರ್ಧರಿಸುತ್ತೇವೆ. ನಡೆದದ್ದೇನು ಹೇಳು ಎನ್ನುವಂತೆ ಅಲೆಕ್ಸ್ ಕೇಳಿದ. 'ಕೊಲೆ' ಎನ್ನುವ ಶಬ್ದ 'ಅನ್ಯಾಯ' ಎನ್ನುವುದಕ್ಕಿಂತ ಬಲವಾಗಿ ಎಲ್ಲರನ್ನು ಅಲುಗಿಸಿತ್ತು.

ಇರಾಕಿನ ಅಬ್ದುಲ್ ಅಜೀಜ್‌ನ ಮುಖದಲ್ಲಿ ಮೊದಲ ಬಾರಿಗೆ ಬೇರೆ ಭಾವನೆಗಳು ಹರಿದಾಡಿದವು. ಅದರಲ್ಲಿ ಕೋಪ, ರೋಷಕ್ಕಿಂತ, ಅಸಹಾಯಕತೆ, ವಿಷಾದ ಮತ್ತು ನಿರಾಶೆಯೇ ಹೆಚ್ಚು ತುಂಬಿದ್ದಂತೆ ನನಗೆ ಅನಿಸಿತು. ಯಾವ ಮಕ್ಕಳಿಗೆ ಪ್ರೀತಿ ಮಾಡುವ ತಾಯಿಯನ್ನು ಸ್ವಂತ ತಂದೆಯೇ ಕೊಲ್ಲಿಸಿದರೆ ಭಯವಾಗದಿದ್ದೀತು? ಅವನು ಬೆಳೆದ ವಾತಾವರಣದಲ್ಲಿ ಅದು ಸರಿ ಎನ್ನುವಂತೆಯೆ ಎಲ್ಲರೂ ಹೇಳಿದ್ದರಂತೆ. ಆತನ ಸುಪ್ತ ಮನಸ್ಸಿನಲ್ಲಿ ಆ ಬಗ್ಗೆ ದುಃಖ, ಭಯ ಮತ್ತು ಅಸಹಾಯಕ ಆಕ್ರೋಶಗಳು ಸದಾ ತುಯ್ದಾಡುತ್ತಿದ್ದವೇನೋ?

ಎಲ್ಲರೂ ತಮ್ಮ ಬದುಕಿನ ರಹಸ್ಯವಾದ ದುಃಖಗಳನ್ನೆಲ್ಲ ಹೇಳಿಕೊಳ್ಳುತ್ತಿರುವ ಈ ಸಮಯವು ಅವನಿಗೆ ತನ್ನ ಬಹುವರ್ಷಗಳ ಒತ್ತಡವನ್ನು ಹೊರಹಾಕುವಂತೆ ಮಾಡಿತ್ತು. ಶುರುಮಾಡಿದ್ದರಿಂದ ನಿಲ್ಲಿಸುವಂತಿರಲಿಲ್ಲ.

ಅಬ್ದುಲ್ ಅಜೀಜ್‌ನ ತಾಯಿ ಅತ್ಯಂತ ಸುಂದರಿಯಾಗಿದ್ದಳಂತೆ. ಇಪ್ಪತ್ತೊಂದನೇ ಶತಮಾನದ ಆಧುನಿಕ ರೀತಿಯಲ್ಲಿ ಅವಳ ತಂದೆ ಅವಳನ್ನು ಬೆಳೆಸಿದ್ದನಂತೆ. ಆಕೆ ಇಂಗ್ಲೆಂಡಿನಲ್ಲೇ ಕಾಲೇಜು ಓದಿದ್ದರಿಂದ ಬದುಕಿನ ಬಗೆಗಿನ ಅವಳ ಯೋಚನೆಗಳು ಭಿನ್ನವಾಗಿದ್ದವಂತೆ.

ಆಗರ್ಭ ಶ್ರೀಮಂತನಾಗಿದ್ದ ಅಬ್ದುಲ್ ಅಜೀಜ್‌ನ ತಂದೆ ಅವಳ ಸೌಂದರ್ಯಕ್ಕೆ ಮನಸೋತು, ಪೀಡಿಸಿ ಮದುವೆಯಾಗಿದ್ದನಂತೆ. ಹೊಸದರಲ್ಲಿ ಅವಳಿಷ್ಟದಂತೆಯೇ ಮೆರೆಸಿದ್ದರೂ ನಿಧಾನವಾಗಿ ಸಾಂಪ್ರದಾಯಿಕ ಕಟ್ಟಳೆಗಳಲ್ಲಿ ಅವಳ ಎಲ್ಲ ಸ್ವಾತಂತ್ರ್ಯವನ್ನೂ ಕಸಿದುಕೊಂಡಿದ್ದನಂತೆ. ಮೂರು ಮಕ್ಕಳ ಅನಂತರ ಅವಳ ಕಡೆಗಿನ ಅವನ ಮೋಹ ಹೊರಗಿನ ಬೇರೆ ಹೆಂಗಸರತ್ತ ತಿರುಗಿತ್ತಂತೆ.

ಅಬ್ದುಲ್ ಅಜೀಜ್‌ಗೆ 14 ವರ್ಷಗಳಾದಾಗ ಅವರ ಅರಮನೆಯಂತಹ ಮನೆಯ ಮುಂದೆ ಅತ್ಯಂತ ದುಬಾರಿ ವೆಚ್ಚದ ಆಧುನಿಕ ಗಾರ್ಡನ್ ಮಾಡಬೇಕೆಂದು ಅವರಪ್ಪ ನಿರ್ಧರಿಸಿದ್ದ. ಎಲ್ಲ ವಿಚಾರಗಳಲ್ಲೂ ಅತ್ಯಂತ ಸುಂದರವಾದದ್ದು, ದುಬಾರಿಯಾದದ್ದನ್ನು ಬಯಸುತ್ತಿದ್ದ ಅವನು ಇಂಗ್ಲೆಂಡಿನಿಂದ ಗಾರ್ಡನ್ ಮತ್ತು ಕಾರಂಜಿಗಳನ್ನು ನಿರ್ಮಿಸಲು ಗಾರ್ಡನ್ ಪ್ಲಂಬಿಂಗ್ ಮತ್ತು ಮೇಜ್ಝ್‌ಗಳ ಪರಿಣತನೊಬ್ಬನನ್ನು ಕರೆಸಿಕೊಂಡಿದ್ದನಂತೆ.

ಹಾಗೆ ಕರೆಸಿಕೊಂಡ ಡೇವಿಡ್ ಅತ್ಯಂತ ಹುರುಪಿನ ಕೆಲಸಗಾರ, ಕಲೆಗಾರ ಮತ್ತು ಕಸುಬುದಾರ.

ಸತತ ಎಂಟು ತಿಂಗಳು ಅವರ ಮನೆಯ ಒಂದು ರೂಮಿನಲ್ಲಿ ತಂಗಿ ಕೆಲಸ ನಡೆಸುತ್ತಿದ್ದ ಅವನ ಜೊತೆ ಅಬ್ದುಲ್ ಅಜೀಜ್‌ನ ಅಮ್ಮನ ಸಲಿಗೆ ಶುರುವಾಗಿತ್ತು ಎನ್ನುವ ವದಂತಿ ಹರಡುವಷ್ಟರಲ್ಲಿ ಡೇವಿಡ್ ಕೆಲಸಮುಗಿಸಿ ಮರಳಿ ಹೋಗಿದ್ದನಂತೆ. ಆದರೆ, ಕೆಂಡಾಮಂಡಲನಾಗಿದ್ದ ಅವರಪ್ಪ ಅವನಮ್ಮನನ್ನು ಕೋಣೆಯೊಂದರಲ್ಲಿ ಬಂಧಿಸಿ, ಥಳಿಸಿದ್ದನಂತೆ. ಅಬ್ದುಲ್ ಅಜೀಜ್ ಮತ್ತು ಅವನ ಇಬ್ಬರು ತಂಗಿಯರಿಗೆ ಅವರಮ್ಮನನ್ನು ನೋಡಲು, ಮಾತಾಡಲು ಅವಕಾಶವಿಲ್ಲದೆ ಅವರು ದುಃಖಿಸಿದ್ದರಂತೆ. ಎಕರೆಗಟ್ಟಲೆ ಜಾಗದಲ್ಲಿರುವ ಮನೆಯ ಗೋಡೆಗಳನ್ನು ದಾಟಿ ಈ ವಿಚಾರ ಹೊರಹೋಗದಂತೆ ಎಲ್ಲ ಆಳುಗಳಿಗೂ ತಾಕೀತು ಮಾಡಲಾಗಿತ್ತಂತೆ.

ಮೂರು ತಿಂಗಳ ಅನಂತರ ಅವರಮ್ಮ ನೇಣುಹಾಕಿಕೊಂಡು ಸತ್ತಿದ್ದನ್ನು ಹೇಳುವಾಗ ಅಬ್ದುಲ್ ಅಜೀಜ್‌ನ ಕಣ್ಣಲ್ಲಿ ನೀರಾಡಿತ್ತು. ಅವರಪ್ಪ ಮತ್ತೊಬ್ಬಳನ್ನು ಮದುವೆಯಾಗಿದ್ದ. ಪ್ರತಿ ಮಕ್ಕಳಿಗೂ ಅಡಿಯಿಂದ ಮುಡಿಯವರೆಗೆ ಚಿನ್ನದಲ್ಲಿ ಹೂತುಹೋಗುವಷ್ಟು ಅಪ್ಪನ ಆಸ್ತಿಯೇನೋ ಸಿಕ್ಕಿತ್ತು.

ಹೀಗಾಗಿ, ಕೆಲಸ ಮಾಡುವ ಅಗತ್ಯವಿಲ್ಲದಿದ್ದರೂ ಹೊರದೇಶಗಳಲ್ಲಿನ ಓದು ಮತ್ತು ತರಬೇತಿ ಅದೂ ಇದೂ ಅಂತ ಓಡಾಡುತ್ತ ಅವನು ಅಪ್ಪನಿಂದ ದೂರವಿರಲು ಪ್ರಯತ್ನಿಸುತ್ತಿದ್ದ. ಲಂಡನ್ನಿನ